೬

ಕಥೆ ಹೇಳುವ ಒಂದು ಕಾರ್ಯಾಗಾರ

ದಿನಕರ್ ಸೊಸೈಟಿ, ಓಜಸ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ರೋಹಿಣಿ, ಡೆಲ್ಲಿ ಅವರ ಸಹಯೋಗದೊಂದಿಗೆ, ಮಾರ್ಚ್ 29, 2013

ಸುನೀತಾ ಮಿಶ್ರಾ ಮತ್ತು ವಿಜಯ್ ಕುಮಾರ್

"ಹಿಂದೆ ಚಕ್ರವನ್ನು ಬಳಸದೆಯೂ ಬಾಳಿದ ಮಹಾ ಸಮಾಜಗಳು ಇದ್ದವು, ಆದರೆ ಕಥೆಗಳನ್ನು ಹೇಳದೆ ಇದ್ದ ಸಮಾಜ ಮಾತ್ರ ಒಂದೂ ಇರಲಿಲ್ಲ." – **ಉರ್ಸುಲಾ ಕೆ ಲೆಗ್ವಿನ್**

ಸಾರಾಂಶ: ಇದು ಕಥಾ ಮಂಚ ಎಂಬ ಗುಂಪು ಕಥೆಗಳನ್ನು ಹೇಳುವುದನ್ನು ಕುರಿತು ನಡೆಸಿದ ಕಾರ್ಯಾಗಾರದ ವರದಿಯಾಗಿದೆ. ಕಥೆಗಳನ್ನು ಹೇಳುವುದು ಮನೋರಂಜನೆಗಾಗಿ ಅಥವಾ ನೀತಿ ಬೋಧನೆಗಾಗಿಯೇ ಅಲ್ಲ, ಅದು ಶೈಕ್ಷಣಿಕ ಪ್ರಕ್ರಿಯೆಯಾಗಿಯೂ ಅತ್ಯಂತ ಮಹತ್ತ್ವದ್ದು ಎಂಬುದು ಕಾರ್ಯಾಗಾರದ ಅನುಭವವಾಗಿ ಹೊಮ್ಮಿದ್ದನ್ನು ಈ ವರದಿ ಮುಂದಿಡುತ್ತದೆ. ಯಾವುದು ಗ್ರಂಥಾಲಯದೊಳಗಿನ ಒಂದು ಸಾಮಾನ್ಯ ರೂಢಿಗತ ಪ್ರಕ್ರಿಯೆಯಾಗಿದೆಯೋ ಅದು ತರಗತಿಯಲ್ಲಿನ ಕಲಿಕಾ ಪ್ರಕ್ರಿಯೆಯಾಗಿ ಅದರ ವಿವಿಧ ರೂಪಗಳಲ್ಲಿ ಆಸಕ್ತಿದಾಯಕ ಬಳಕೆಯಾದಾಗ ಮಕ್ಕಳ ಕಲಿಕೆ ಆನಂದದಾಯಕವೂ, ಅದರಲ್ಲಿನ ಸೃಷ್ಟಿಶೀಲತೆಯನ್ನು ಹೊರಹೊಮ್ಮಿಸುವ ಸಾಧನವಾಗಿಯೂ ಪಠ್ಯ ಆಧಾರಿತ ಚೌಕಟ್ಟಿನಿಂದ ಹೊರಬರುವಂಥ ಸಾಧ್ಯತೆಯನ್ನು ಹೊಂದಿದೆ ಎಂಬುದನ್ನೂ ಈ ವರದಿ ವಿಶದಪಡಿಸುತ್ತದೆ.

ಪ್ರಮುಖ ಪದಗಳು: ತೆರೆದುಕೊಳ್ಳುವಿಕೆ–Exposure, ಬೋಧನಾ ವಿಧಾನ ಪರಿಕರ–Pedagogical tool, ಜನಪದ– folklore, - ಮಾಹಿತಿ ಸಂವಹನ ತಂತ್ರಜ್ಞಾನ – ICT (Information Communication Technology), ಕಥೆಗಳು ಬೋಧನೆಯ ಸಾಧನವಾಗಿ– stories as a pedagogical tool.

ಪೀಠಿಕೆ

ಕಥೆಗಳು ಮತ್ತು ಜನಪದ ಸಾಹಿತ್ಯ ಭಾರತೀಯ ಸಂಸ್ಕೃತಿಯ ಹೃದಯವಾಗಿವೆ. ಶತಮಾನಗಳಿಂದ, ಮಕ್ಕಳಿಗೆ ಅವರ ಪ್ರಾರಂಭದ ಪ್ರಾಪಂಚಿಕ ತೆರೆದುಕೊಳ್ಳುವಿಕೆ ಎಂಬುದು ಅವರ ಕುಟುಂಬದ ಸದಸ್ಯರಿಂದ, ವಿಶೇಷವಾಗಿ ಅವರ ಅಜ್ಜ–ಅಜ್ಜಿಯರಿಂದ ಕೇಳಿಸಿಕೊಂಡ ಕಥೆಗಳ ಮೂಲಕವೇ ಆಗಿರುತ್ತದೆ. ಈ ಕಥೆಗಳು ಅವರ ಕಲ್ಪನೆಗಳನ್ನು ಸಮೃದ್ಧಗೊಳಿಸಿವೆ ಅಷ್ಟೇ ಅಲ್ಲ, ಜೊತೆಗೆ ವೈವಿಧ್ಯದ ಪ್ರತೀಕವಾಗಿ ಪ್ರಸಂಚದ ವಿವಿಧ ಬಣ್ಣ ಮತ್ತು ಛಾಯೆಗಳನ್ನು ಗಮನಿಸುವುದಕ್ಕೂ ಅವಕಾಶ ಮಾಡಿಕೊಟ್ಟಿವೆ. ಸುತ್ತಮುತ್ತ ಜನರು ಮಾತನಾಡುವ ಭಾಷೆಗಳ ಅನುಭವವನ್ನೂ ಮಕ್ಕಳಿಗೆ ಮಾಡಿಕೊಟ್ಟಿವೆ. ಈ ಒಂದು ಅವಕಾಶದಿಂದ ಇಂದಿನ ತಲೆಮಾರು ವಂಚಿತವಾಗುತ್ತಿದೆಯೋ ಏನೋ ಅನಿಸುತ್ತದೆ. ಕಥಾ ಮಂಚವು ಕಲಿಕಾ ಪ್ರಕ್ರಿಯೆಯ ಭಾಗವಾಗಿ ಕಥೆಗಳ ಬಳಕೆಯ ಬಗ್ಗೆ ಬದ್ಧತೆ ಇರುವ ಗುಂಪಾಗಿದ್ದು ಮತ್ತು ಈ ದಿಸೆಯಲ್ಲಿ ಉಂಟಾಗಿರುವ ಕಂದರವನ್ನು ಮುಚ್ಚುವ ಆಶಯವನ್ನು ಹೊಂದಿದೆ.

ಕಥಾ ಮಂಚವು ಶಾಲಾ ಶಿಕ್ಷಕರು, ಶಿಕ್ಷಕ ಪ್ರಶಿಕ್ಷಣಾರ್ಥಿಗಳು, ಕ್ಷೇತ್ರ ಸುಗಮಕಾರರು, ವಿಶ್ವವಿದ್ಯಾಲಯದ ಪ್ರಾಧ್ಯಾಪಕರು, ವಿದ್ಯಾರ್ಥಿಗಳು, ಇತ್ಯಾದಿಯವರಿಂದ ಕೂಡಿದ ಮತ್ತು ಶಿಕ್ಷಣ ಕ್ಷೇತ್ರದ ಜೊತೆ ಕೈಜೋಡಿಸಿದವರೂ ಇರುವ ಒಂದು ಅನೌಪಚಾರಿಕ ಗುಂಪಾಗಿದೆ. ಈ ಗುಂಪಿನ ಬಹುಪಾಲು ಸದಸ್ಯರು ಕಥೆಗಳ ಮತ್ತು ಕಥೆ ಹೇಳುವುದರ ಪ್ರಭಾವವನ್ನು ತಾವೇ ಅನುಭವಿಸಿದವರು. ಅದು ಮಕ್ಕಳ ಗಮನವನ್ನು ಸೆರೆಹಿಡಿಯುವುದರಲ್ಲಿ ಮಾತ್ರವಲ್ಲ, ಜೊತೆಗೆ ಅವರ ಓದುವ ಮತ್ತು ಬರೆಯುವ ಕೌಶಲಗಳನ್ನು ಸುಧಾರಣೆ ಮಾಡುವುದರಲ್ಲೂ, ಅವರ ಕಲ್ಪನಾಶೀಲತೆ ಮತ್ತು ಬೌದ್ಧಿಕ ಕೌಶಲಗಳನ್ನು ಬೆಳೆಸುವುದರಲ್ಲೂ, ಮತ್ತು ಅವರನ್ನು, ವಿವಿಧ ಸಂಸ್ಕೃತಿ ಮತ್ತು ಪ್ರಾಪಂಚಿಕ ದೃಷ್ಟಿಕೋನಗಳ ಬಗ್ಗೆ ಸಹನಶೀಲತೆ ಬೆಳೆಸಿಕೊಳ್ಳುವ ಸಾಮರ್ಥ್ಯ ಹೊಂದುವ ಸೂಕ್ಷ್ಮಜ್ಞರಾಗುವಂತೆ ಮಾಡುವಲ್ಲಿಯೂ ತೊಡಗಿದ್ದಾರೆ. ಕಥಾ ಮಂಚವು ಈ ಕೆಳಗಿನ ಉದ್ದೇಶಗಳೊಂದಿಗೆ ಒಂದು ದಿನದ ಕಾರ್ಯಾಗಾರವನ್ನು ಸಂಘಟಿಸಿತು.

- ಕಥೆ ಹೇಳುವುದರಲ್ಲಿ ಆಸಕ್ತರಾಗಿರುವ ಜನರ ಒಂದು ಕಾರ್ಯಜಾಲವನ್ನು ನಿರ್ಮಿಸುವುದು
- ಕಥೆ ಹೇಳುವ ವಿವಿಧ ವಿಧಾನಗಳನ್ನು ಪ್ರದರ್ಶಿಸುವುದು

- ಕಥೆಗಳನ್ನು ಬೋಧನಾ ವಿಧಾನದ ಪರಿಕರವಾಗಿ ಬಳಕೆ ಮಾಡುವುದನ್ನು ಚರ್ಚಿಸುವುದು
- ಜನಪದ ಸಾಹಿತ್ಯ ರೂಪದಲ್ಲಿ ಪ್ರದರ್ಶಿತವಾಗುವ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಮೆಚ್ಚಿ ಸಂತೋಷಪಡುವುದು
- ಗುಂಪಿನ ಭವಿಷ್ಯದ ಚಟುವಟಿಕೆಗಳನ್ನು ಕುರಿತು ಸಲಹೆ ಸೂಚನೆಗಳನ್ನು ಸ್ವಾಗತಿಸುವುದು

ಭಾಗವಹಿಸಿದವರ ವಿವರ

ಕಾರ್ಯಾಗಾರದಲ್ಲಿ ಭಾಗವಹಿಸಿದವರಲ್ಲಿ ಶಾಲಾ ಪ್ರಶಿಕ್ಷಣಾರ್ಥಿಗಳು, ಶಿಕ್ಷಣ ಶಿಕ್ಷಾರ್ಥಿಗಳು(ಬಿ ಎಲ್ ಎಡ್, ಬಿಎಡ್, ಜೆಬಿಟಿ, ಇತ್ಯಾದಿ), ಶಾಲಾ ಪ್ರಾಂಶುಪಾಲರು, ದೆಹಲಿ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರುಗಳು, ಕ್ಷೇತ್ರ ಸುಗಮಕಾರರು ಮತ್ತು ಕಥೆಗಳನ್ನು ಹೇಳುವುದರಲ್ಲಿ ಆಸಕ್ತಿ ಇದ್ದವರು ಇದ್ದರು.

ಕಾರ್ಯಾಗಾರಗಳು

ಕಾರ್ಯಾಗಾರವು ಪರಿಚಯಾತ್ಮಕ ಚಟುವಟಿಕೆಯೊಂದಿಗೆ ಪ್ರಾರಂಭವಾಯಿತು. ಅದರಲ್ಲಿ ಪ್ರಸ್ತುತಿಗಾರರು ತರಗತಿ ಕೋಣೆಯೊಳಗಿನ ಬೋಧನಾ ಪರಿಕರವಾಗಿ ಕಥೆಗಳ ಪ್ರಾಮುಖ್ಯವನ್ನು, ಅವರ ಸ್ವಂತದ ಮತ್ತು ಅವರ ವಿದ್ಯಾರ್ಥಿಗಳ ಬೋಧನಾ ಅನುಭವಗಳ ಉದಾಹರಣೆಗಳೊಂದಿಗೆ ಚರ್ಚಿಸಿದರು. ಅವರು ಕಥೆ ಹೇಳುವುದರ ಭಾಷಿಕ ಮತ್ತು ಸಾಂಸ್ಕೃತಿಕ ಮಹತ್ತ್ವವನ್ನು ಒತ್ತಿ ಹೇಳಿದರು. ಜೊತೆಗೆ ಅವರು ಸ್ವಂತ ಮತ್ತು ಬೋಧನಾ ಅನುಭವವನ್ನು ಆಧರಿಸಿ ಕಥೆ ಹೇಳುವ ಚಟುವಟಿಕೆಯು ಕ್ರಮೇಣ ಕಡಮೆಯಾಗುತ್ತಿರುವುದನ್ನು ಗಮನಿಸಿರುವುದಾಗಿ ಹೇಳಿದರು. ಅವುಗಳನ್ನು ಪುನರುಜ್ಜೀವಗೊಳಿಸಬೇಕು ಎಂದೂ ಹೇಳಿದರು. ಐಸಿಟಿ (ಮಾಹಿತಿ ಸಂವಹನ ಮತ್ತು ತಂತ್ರಜ್ಞಾನ ICT - Information Communication Technology), ಬಹುಮಾಧ್ಯಮಗಳು, ಇತ್ಯಾದಿಗಳ ಆಗಮನದೊಂದಿಗೆ ಜನರಿಗೆ ಕಥೆಗಳನ್ನು ಹೇಳುವುದರಿಂದ ಮತ್ತು ಆಲಿಸುವುದರಿಂದ ಬರುವ ಆಪ್ತತೆಯ ಮತ್ತು ಸೌಖ್ಯದ ಭಾವನೆಗಳಿಗೆ ತೆರೆದುಕೊಳ್ಳುವ ಅವಕಾಶಗಳೇ ಇಲ್ಲದಂತಾಗಿದೆ. ಇದು ವಿಶೇಷವಾಗಿ ಮಕ್ಕಳ ವಿಷಯದಲ್ಲಂತೂ ನಿಜವೇ ಆಗಿದೆ. ಇದರ ಅನುಪಸ್ಥಿತಿಯಲ್ಲಿ, ಮಕ್ಕಳು ಟೆಲಿವಿಷನ್ ಮತ್ತು ಇತರೆ ಮಾಧ್ಯಮಗಳಿಗೆ ಮೊರೆ ಹೋಗುತ್ತಿದ್ದಾರೆ.

ಮುಂದಿನ ಕಾರ್ಯಾಗಾರವನ್ನು ದೆಹಲಿ ವಿಶ್ವವಿದ್ಯಾಲಯದ ಬಿಎಲ್‌ಎಡ್ (ಪ್ರಾಥಮಿಕ ಶಿಕ್ಷಣ ಪದವಿ–ಬಿಎಲ್‌ಎಡ್– Bachelor of Elementary Education) ವಿದ್ಯಾರ್ಥಿಗಳು ನಡೆಸಿಕೊಟ್ಟರು. ಅವರು ಕಥಾ ನಿರೂಪಣೆಯ ವಿವಿಧ ವಿಧಾನಗಳ ಬಗ್ಗೆ ಗಮನ ಹರಿಸುವಂತೆ ಮಾಡಿದರು. ಮೊದಲ ಪ್ರದರ್ಶನವು "ಪಿಂಕೂ ಪಿಗ್ಗಿ" ಕಥೆಯನ್ನು ಆಧರಿಸಿದ ಒಂದು ಏಕವ್ಯಕ್ತಿ ರಂಗಭೂಮಿ ಪ್ರದರ್ಶನವಾಗಿತ್ತು. ಅದು ಹಂದಿಗಳು ಹೊಲಸು ಪರಿಸರವನ್ನು ಯಾಕೆ ಇಷ್ಟಪಡುತ್ತವೆ ಎಂದು ವಿವರಿಸುವ ಮಕ್ಕಳ ನೀತಿ ಕಥೆಯಾಗಿತ್ತು. ಇದಾದ ಅನಂತರ "ಮಂಗ ಮತ್ತು ಮೊಸಳೆ" ಎಂಬ ಪ್ರಸಿದ್ಧ ಪಂಚತಂತ್ರದ ಕಥೆಯ ಪಾತ್ರಾಭಿನಯವನ್ನು ಮಾಡಲಾಯಿತು. ಮೂವರು ಪಾತ್ರಧಾರಿಗಳು ಮಂಗ, ಮೊಸಳೆ ಹಾಗೂ ಮೊಸಳೆಯ ಹೆಂಡತಿಯ ಪಾತ್ರಗಳನ್ನು ಮಾಡಿ ತೋರಿಸಿದರು. ಅವರು ಸಂಭಾಷಣೆಗಳನ್ನು ಪ್ರಸ್ತುತ ಸಂದರ್ಭಕ್ಕೆ ಹೊಂದುವಂತೆ ಸಹಜ ರೀತಿಯಲ್ಲಿ ಆಡಿದಾಗ ಅದು ಒಂದು ಪಾರಂಪರಿಕ ಸಿದ್ಧ ಕಥೆಗೆ ತಮಾಷೆಯ ಭಾವವನ್ನು ತುಂಬಿತು. ಅವರ ಮುಂದಿನ ಪ್ರಸ್ತುತಿಗಾರರೂ ಒಂದು ತಮಾಷೆಯ ಪ್ರಸಂಗವನ್ನೇ ಆಡಿತೋರಿಸಿದರು. ಅದು ಒಂದು ಹಕ್ಕಿಯ ಕಾಲು ಒರಳು ಕಲ್ಲಿನಲ್ಲಿ ಸಿಕ್ಕಿಹಾಕಿಕೊಂಡ ಪ್ರಸಿದ್ಧ ಜನಪದ ಕಥೆಯನ್ನು ಆಧರಿಸಿತ್ತು. ರಾಗಬದ್ಧವಾಗಿ ಹಾಡಿನ ರೂಪದಲ್ಲಿ ಪ್ರಸ್ತುತಪಡಿಸಿದ್ದರಿಂದ ಅದನ್ನು ವೀಕ್ಷಕರು ನಿಜವಾಗಿಯೂ ಆನಂದಿಸಿದರು. ಕೊನೆಯ ಪ್ರದರ್ಶನವು ಓರ್ವ ಪುಟಾಣಿ ಹುಡುಗಿಯು ತನ್ನ ಪ್ರಸಂಗಾವಧಾನತೆಯಿಂದ ಮತ್ತು ತನ್ನ ತಾಯಿಯ ಬುದ್ಧಿಮಾತುಗಳಿಂದ ಅರಣ್ಯದ ಪ್ರಾಣಿಗಳಿಂದ ಹೇಗೆ ರಕ್ಷಿಸಿಕೊಂಡಳು ಎಂಬ ಕಥೆಯನ್ನು ಆಧರಿಸಿತ್ತು. ಅದು ಗೊಂಬೆಯಾಟದ ರೂಪದಲ್ಲಿ ಇತ್ತು ಮತ್ತು ಹಾಡುಗಳಿಂದಲೂ ಕೂಡಿತ್ತು. ಹೀಗೆ ಭಾಗವಹಿಸಿದ ಎಲ್ಲರಿಗೂ ಕಥೆಗಳನ್ನು ಹೇಗೆ ಬೇರೆ ಬೇರೆ ರೂಪಗಳಲ್ಲಿ, ವೈಯಕ್ತಿಕವಾಗಿ ಮತ್ತು ತಂಡಗಳಲ್ಲಿ, ಕಲಿಕಾರ್ಥಿಗಳಿಗೆ ಲವಲವಿಕೆಯಿಂದ, ಆಸಕ್ತಿದಾಯಕವಾಗಿ ಮತ್ತು ಸಹಜವಾಗಿ ಪ್ರದರ್ಶಿಸಬಹುದು ಎಂಬ ಆಲೋಚನೆಯನ್ನು ಮೂಡಿಸಿತು.

ಪ್ರದರ್ಶನಗಳನ್ನು ಹಿಂಬಾಲಿಸಿ ವಿವಿಧ ರೂಪದ ಕಥೆ ಹೇಳುವಿಕೆ, ಮತ್ತು ಅವುಗಳು ಈಡೇರಿಸುವ ಉದ್ದೇಶಗಳ ಕುರಿತಂತೆ ಚರ್ಚೆಗಳಾದವು. ಪ್ರಸ್ತುತಿಗಾರರು ತಮ್ಮ ಬೋಧನಾಭ್ಯಾಸದಲ್ಲಿ (ಇಂಟರ್ನ್‌ಶಿಫ್) ಮೇಲಿನ ರೀತಿಯ ವಿವಿಧ ನಿರೂಪಣಾ ಶೈಲಿಗಳನ್ನು ಅಳವಡಿಸಿಕೊಂಡಿದ್ದರು. ಅವುಗಳನ್ನು ನಿರ್ದಿಷ್ಟ ಕಲಿಕಾಂಶಗಳಿಗೆ ವಿಸ್ತರಿಸಿ ವಿವರಿಸಿದರು. ಪಾತ್ರಾಭಿನಯವು ಸೃಷ್ಟಿಶೀಲ ಸಂಭಾಷಣೆಯ ಬರವಣಿಗೆ ಮತ್ತು ಸನ್ನಿವೇಶ ಆಧಾರಿತ ಬರವಣಿಗೆಗಳನ್ನು ಬೆಳೆಸುವುದಕ್ಕೆ ಅತ್ಯಂತ

ಉಪಯುಕ್ತವಾಗಿರುವುದನ್ನು ಗುರುತಿಸಲಾಯಿತು. ಅದೇ ವೇಳೆ, ಜನಪದ ಕಥೆಗಳನ್ನು ಹಾಡಿಗೆ ಅಳವಡಿಸುವಾಗ ಪ್ರಾಸಬದ್ಧ ಪುನರಾವರ್ತನೆಯು ಆರಂಭಿಕ ಕಲಿಕೆಯವರಲ್ಲಿ ಓದುವಿಕೆಯ ಮತ್ತು ಬರವಣಿಗೆಯ ಕೌಶಲಗಳನ್ನು ಬೆಳೆಸುವ ತಂತ್ರವಾಗಿ ಬಳಕೆಯಾಗುವುದನ್ನು ಗುರುತಿಸಲಾಯಿತು.

ಭಾಗವಹಿಸಿದ ಇನ್ನುಳಿದವರು ಕಥೆಗಳ ನಿರೂಪಣೆಗಳು ಅವರ ವಿದ್ಯಾರ್ಥಿಗಳ ಮೂಲ ಭಾಷಾ ಕೌಶಲಗಳನ್ನು ಬೆಳೆಸುವುದಕ್ಕೆ ಹೇಗೆಲ್ಲ ಸಹಾಯ ಮಾಡಿವೆ ಎಂಬ ತಮ್ಮ ಅನುಭವಗಳನ್ನು ಹಂಚಿಕೊಂಡರು. ಕಥೆಗಳು ಪ್ರತಿನಿಧಿಸುವ ಸಮಾಜೋ–ಸಾಂಸ್ಕೃತಿಕ ಅಂಶಗಳನ್ನೂ ಸಹಿತ ಚರ್ಚಿಸಲಾಯಿತು. ಭಾಗವಹಿಸಿದವರು ಕೊನೆಯಲ್ಲಿ ಕಥೆಗಳಲ್ಲಿ ಪುರುಷ ವ್ಯಕ್ತಿಗಳೇ ಹೇಗೆ ಮತ್ತು ಯಾವಾಗಲೂ ಕ್ರಿಯೆಗೆ ಮುಂದಾಗುವ ಮತ್ತು ಕಠಿಣ ಪರಿಸ್ಥಿತಿಗಳನ್ನು ಎದುರಿಸಿ ಗೆಲ್ಲುವ ರೂಢಮಾದರಿಗಳೇ (stereotype) ಕಂಡು ಬರುತ್ತವೆಯಲ್ಲ ಎಂಬುದನ್ನು ಗುರುತಿಸಿದರು.

ಈ ಚರ್ಚೆಗಳ ಅನಂತರ ಭಾಗವಹಿಸಿದ ಮೂರು ಜನರಿಂದ ಮೂರು ಬೇರೆ ಬೇರೆ ಭಾಷೆಗಳಿಂದ ಆಯ್ದ ಜನಪದ ಹಾಡುಗಳ ಚೇತೋಹಾರಿಯಾದ ಗಾಯನ, ಕೀ ಬೋರ್ಡ್, ಹಾರ್ಮೋನಿಯಂ ಮತ್ತು ತಬಲಗಳ ಸಾಥ್‌ನಲ್ಲಿ ನಡೆಯಿತು. ಈ ಪ್ರದರ್ಶನದ ಮೂಲಕ, ಸಾಂಪ್ರದಾಯಿಕ ಕಥಾ ವಾಚನವು ಸಮಾಜ ಮತ್ತು ಸಂಸ್ಕೃತಿಯ ಸೃಷ್ಟಿಶೀಲ ಕಲೆಗಳ ಜೊತೆಗೆ ಆಳವಾಗಿ ಹಾಸುಹೊಕ್ಕಾಗಿರುವ ಅಂಶವನ್ನು ಮರು ಸೃಷ್ಟಿಸಿದಂತೆ ಆಯಿತು. ಇದಾದ ಅನಂತರ, ಒಬ್ಬರು ಶಿಕ್ಷಕರು ಸ್ವರಚಿತ ಕವನವನ್ನು ವಾಚಿಸಿದರು.

ಪ್ರದರ್ಶನಗಳ ಅನಂತರ ಚರ್ಚೆಯು ಸಿಐಇ ಶಾಲೆಯ ಪ್ರಾಂಶುಪಾಲರು ತಮ್ಮ ಶಾಲೆಯಲ್ಲಿ ಕಥೆ ಹೇಳುವುದನ್ನು ಬೋಧನಾ ಪರಿಕರವಾಗಿ ಬಳಸಿಕೊಂಡ ಅನುಭವವನ್ನು ಹಂಚಿಕೊಳ್ಳುವುದರ ಮೂಲಕ ಪ್ರಾರಂಭವಾಯಿತು. ಅವರು ತಾವು ನಡೆಸಿದ ಹೋರಾಟ ಮತ್ತು ಯಶಸ್ಸನ್ನು ಕುರಿತು ಮಾತಾಡಿದರು. ಅವರು ತರಗತಿಗಳಲ್ಲಿ ಕಥೆಗಳ ಬಳಕೆಯ ಅನಂತರ ಮಕ್ಕಳ ಸಾಧನೆಯಲ್ಲಿ ಆದ ಗಣನೀಯ ಹೆಚ್ಚಳವನ್ನು ಕಂಡ ಮೇಲೆ ಶಿಕ್ಷಕರ ಮನೋಭಾವ ಮತ್ತು ವರ್ತನೆಯಲ್ಲಿ ಆದ ಬದಲಾವಣೆಯನ್ನು ಒತ್ತಿ ಹೇಳಿದರು.

ಹಿಮ್ಮಾಹಿತಿ ಮತ್ತು ಚರ್ಚೆಯ ಮುಂದುವರಿಕೆ

ಭಾಗವಹಿಸಿದವರು ಪ್ರದರ್ಶನಗಳನ್ನು ಬಹಳ ಆನಂದಿಸಿದರು, ಮತ್ತು ಚರ್ಚಿಸಲ್ಪಟ್ಟ ನಿರೂಪಣಾ ಶೈಲಿಗಳು ಕೇವಲ ಭಾಷೆಗೆ ಮಾತ್ರವಲ್ಲದೆ ಇನ್ನಿತರ ಎಲ್ಲ ವಿಷಯ ಕ್ಷೇತ್ರಗಳ ಶೈಕ್ಷಣಿಕ ಪ್ರಕ್ರಿಯೆಗಳಿಗೂ ಅತ್ಯಂತ ಸಹಾಯಕವಾಗಿವೆ ಎಂಬ

ಅಂಶವನ್ನೂ ಗಮನಿಸಿದರು. ಒಬ್ಬ ಭಾಗೀದಾರರ ದೃಷ್ಟಿಯಲ್ಲಿ, ಕಲಿಕಾ ಪ್ರಕ್ರಿಯೆಗಳ ಪರಿಕರಗಳಾಗಿ ಕಥೆಗಳು, ಗಂಭೀರವಾಗಿ ತೆಗೆದುಕೊಂಡುದೇ ಆದರೆ, ಪಠ್ಯಪುಸ್ತಕಗಳನ್ನೂ ಸ್ಥಾನಪಲ್ಲಟ ಮಾಡಿಬಿಡಬಹುದು ಎಂಬ ಅಭಿಪ್ರಾಯವು ವ್ಯಕ್ತವಾಯಿತು. ಜನಪದ ಸಾಹಿತ್ಯಕ್ಕೆ ಸಂಬಂಧಿಸಿದಂತೆ, ಓರ್ವ ಶಿಕ್ಷಕರ ಶಿಕ್ಷಕರು, ಮೌಖಿಕ ಪರಂಪರೆಯ ಚರಿತ್ರೆಯು ಹೇಗೆ ಮರು ಅವಲೋಕನಕ್ಕೆ ಒಳಗಾಯಿತು ಮತ್ತು ಅದು ಹೇಗೆ ಸಮಕಾಲೀನ ಸಮಾಜಶಾಸ್ತ್ರೀಯ ಅಧ್ಯಯನಗಳಲ್ಲಿ ಬಳಕೆಯಾಗುತ್ತಿದೆ ಎಂಬ ಅಂಶವನ್ನು ಬೆಟ್ಟು ಮಾಡಿ ತೋರಿಸಿದರು.

ಶಿಕ್ಷಕರ ಶಿಕ್ಷಣದ ಓರ್ವ ವಿದ್ಯಾರ್ಥಿಯು, ಒಂದು ಉತ್ತಮ ಕಥೆಯ ಆಯ್ಕೆಗೆ ಮಾನದಂಡಗಳು ಏನು ಎಂಬ ಪ್ರಶ್ನೆಯನ್ನು ಕೇಳಿದರು. ಇದಕ್ಕೆ ಭಾಗವಹಿಸಿದವರು ಸ್ಪಂದಿಸಿ “ಮಗುವಿನ ಭಾಷೆ ಮತ್ತು ಶಿಕ್ಷಕ” ಎಂಬ ಪುಸ್ತಕವನ್ನು ಓದಲು ಶಿಫಾರಸು ಮಾಡಿದರು. ಮುಂದುವರಿದು ಕಥೆ ಹೇಳುವುದರ ಮೇಲಿನ ಕೃಷ್ಣಕುಮಾರರ ಒಂದು ಲೇಖನವನ್ನೂ ಬಹು ಅಮೂಲ್ಯವೆಂದು ಉಲ್ಲೇಖಿಸಿದರು. ಅದರಲ್ಲಿ ಕೃಷ್ಣಕುಮಾರರು ಮಕ್ಕಳಿಗೆ ಆಯ್ಕೆ ಮಾಡಬಹುದಾದ ಉತ್ತಮ ಸಾಹಿತ್ಯ ಯಾವುದು ಎಂಬುದರ ಮಾನದಂಡಗಳನ್ನು ಆಳವಾಗಿ ಚರ್ಚಿಸಿದ್ದಾರೆ ಎಂದೂ ತಿಳಿಸಿದರು.

ಅಂತಿಮವಾಗಿ, ಭಾಗವಹಿಸಿದವರು, ಶಿಕ್ಷಕರು ಕಥೆಗಳನ್ನು ತಮ್ಮ ಬೋಧನಾ ಪರಿಕರವಾಗಿ ಬಳಸುವುದನ್ನು ಮಾತ್ರವಲ್ಲದೆ, ತಮ್ಮದೇ ಕಥೆಗಳನ್ನು ಹೆಣೆಯುವವರೂ ಆಗುವುದನ್ನು ಪ್ರೋತ್ಸಾಹಿಸಬೇಕು ಎಂಬ ವಿಷಯವನ್ನು ಒಪ್ಪಿಕೊಂಡು, ಅವರು ಸೃಷ್ಟಿಸುವ ಕಥೆಗಳು ಕಲಿಕೆಯನ್ನು ಹೆಚ್ಚು ಆನಂದಿಸುವಂತೆ ಮಾಡುವ ತಂತ್ರಗಳನ್ನೂ ಒಳಗೊಂಡಿರಬೇಕು ಎನ್ನುತ್ತಾ ಮುಕ್ತಾಯ ಮಾಡಿದರು. ಕಾರ್ಯಾಗಾರದಲ್ಲಿ ಹಾಜರಿದ್ದ ಭಾಗಾರ್ಥಿಗಳ ಗುಂಪು ವಿವಿಧ ಕಥಾ ನಿರೂಪಣೆಯ ರೂಪಗಳನ್ನು ಶೋಧಿಸಿಕೊಳ್ಳುವುದಕ್ಕೆ ಶಿಕ್ಷಕರ ಜೊತೆಗೆ ಕೆಲಸ ಮಾಡುವುದಕ್ಕೆ ನೆರವಿನ ಹಸ್ತವನ್ನು ಮುಂದೆ ಚಾಚಿತು. ಈ ಬಗೆಯ ಹೊಸ ವಿಧಾನಗಳನ್ನು ಅನಂತರ ತರಗತಿಯೊಳಗೆ ಪ್ರಯೋಗಿಸಬಹುದು, ಅವನ್ನು ಕಾಲಕಾಲಕ್ಕೆ ಪುನರವಲೋಕಿಸಬಹುದು ಮತ್ತು ಸೂಕ್ತವಾಗಿ ಬೆಳೆಸಿಕೊಳ್ಳಬಹುದು ಎಂಬ ಸೂಚನೆಯೂ ಪ್ರಸ್ತಾವವಾಯಿತು. ಇವುಗಳ ಜೊತೆಗೆ ಪ್ರಾಥಮಿಕ ಶ್ರೇಣಿಗಳ ಮಕ್ಕಳಿಗೆ ತಮ್ಮ ತರಗತಿಯೊಳಗೆ ಕಥೆಗಳನ್ನು ಬರೆಯುವಂತೆ ಮತ್ತು ಪ್ರದರ್ಶಿಸುವಂತೆ ಪ್ರೋತ್ಸಾಹಿಸಬಹುದು. ಒಮ್ಮೆ ಅವರು ಕಥೆಗಳನ್ನು ಸೃಷ್ಟಿಸುವುದರಲ್ಲಿ ಕುಶಲಿಗರಾದರೆ, ಅದರ ಮುಂದಿನ ಹೆಜ್ಜೆಯು ಮಕ್ಕಳ ಬರವಣಿಗೆಯ ಕೌಶಲಗಳನ್ನು ಸುಧಾರಿಸುವುದು ಆಗುತ್ತದೆ. ಆಗ ಅವರು ಬರವಣಿಗೆ ರೂಪದ ಕಥೆಗಳನ್ನು ಚಿತ್ರ, ಮುಂತಾದ ರೂಪಗಳನ್ನು ಸೇರಿಸಿಯೂ ಪ್ರದರ್ಶನ ಮಾಡಬಹುದು.

ಭಾಗಾರ್ಥಿಗಳು ಇಂತಹ ಕಾರ್ಯಾಗಾರಗಳನ್ನು ಹೆಚ್ಚುಹೆಚ್ಚು ಸಂಘಟಿಸಬೇಕು ಮತ್ತು ಹೆಚ್ಚು ಸಂಖ್ಯೆಯ ಶಿಕ್ಷಕರನ್ನು ಇದರಲ್ಲಿ ಒಳಗೊಳಿಸಬೇಕು, ಆ ಮೂಲಕ ಕಥೆ ಹೇಳುವುದು ಲೈಬ್ರರಿ ಕೋಣೆಯ ಒಂದು ಅವಧಿಗೆ ಮಿತಿಯಾಗುವ ಬದಲಿಗೆ ಬೋಧನೆಯ ಒಂದು ವಿಧಾನವಾದೀತು ಎಂಬುದಾಗಿ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರು ಮತ್ತು ಬಹಳ ಶಿಕ್ಷಕ ಶಿಕ್ಷಣದ ಕೋರ್ಸ್‌ಗಳು ಕೂಡಾ ಕಥೆ ಹೇಳುವುದಕ್ಕೆ ಬಹಳ ಅವಕಾಶಗಳನ್ನು ಮಾಡಿಕೊಡುವುದಿಲ್ಲ ಎಂದೂ ಸೇರಿಸಿ ಹೇಳಿದರು. ಜೊತೆಗೆ ಶಿಕ್ಷಕ ಶಿಕ್ಷಣದ ಪಠ್ಯಕ್ರಮದ ಕಡ್ಡಾಯ ಭಾಗವಾಗಬೇಕು ಎಂದೂ ಒತ್ತಾಯಿಸಿದರು.

ಕಥೆಗಳನ್ನು ವಿವಿಧ ರೂಪಗಳಲ್ಲಿ ಹೇಳಬಹುದು. ಅದು ಪದ್ಯ, ಹಾಡು, ಗಾಯನ, ನಿರೂಪಣೆ, ಇತ್ಯಾದಿ ಬಹುವಿಧವಾಗಿ ಇರಬಹುದು. ಕಥೆಗಳನ್ನು ಈ ಎಲ್ಲ ರೂಪಗಳನ್ನು ಸ್ವತಂತ್ರವಾಗಿಯೂ ಅಥವಾ ಅಗತ್ಯಕ್ಕೆ ತಕ್ಕಂತೆ ಒಂದರೊಡನೆ ಇನ್ನೊಂದನ್ನು ಸೇರಿಸಿಯೂ ಹೇಳಬಹುದು.

> "ಮಕ್ಕಳು ಆ ಕಥೆಗಳಲ್ಲಿ ಆಡಿದರು;
> ಅವುಗಳ ಕುರಿತಾಗಿ ಕನಸು ಕಂಡರು.
> ಅವುಗಳನ್ನು ಅವರು ಹೃದಯಕ್ಕೇ ತೆಗೆದುಕೊಂಡರು
> ಮತ್ತು ಅವುಗಳ ಒಳಗೇ ಜೀವಿಸುವಂತೆ ಅಭಿನಯಿಸಿದರು." –
> ಗ್ರಿಗೊರಿ ಮಗ್ವೈರೆ, "ಎ ಲಯನ್ ಅಮಾಂಗ್ ಮೆನ್"

* * *

ಚಿಂತನಾತ್ಮಕ ಪ್ರಶ್ನೆಗಳು:

೧. "ಕಥೆ ಹೇಳುವುದರಿಂದ, ಕೇಳುವುದರಿಂದ ಭಾವನೆಗಳು, ಕಲ್ಪನೆಗಳು ಬೆಳೆಯುತ್ತವೆ" ಈ ಬಗ್ಗೆ ನಿಮ್ಮ ಅಭಿಪ್ರಾಯವೇನು?

೨. ಈ ಕಾರ್ಯಾಗಾರದ ಆಶಯವೇನು? ನಿಮಗೂ ಕಥೆ ಹೇಳುವುದರಿಂದ/ ಕೇಳುವುದರಿಂದ ಲಾಭವಿದೆಯೆನಿಸುತ್ತದೆಯೇ?

೩. ನೀವು ಮಕ್ಕಳಿಗೆ ಕಥೆ ಹೇಳಿ, ಅವರ ಪ್ರತಿಕ್ರಿಯೆಗಳನ್ನು, ನಿಮ್ಮ ಅನುಭವವನ್ನು ದಾಖಲಿಸಿ.

ಸುನೀತಾ ಮಿಶ್ರಾ: ಅವರು ದೆಹಲಿ ವಿಶ್ವವಿದ್ಯಾಲಯದ ಇನ್‌ಸ್ಟಿಟ್ಯೂಟ್ ಆಫ್ ಹೋಂ ಇಕನಾಮಿಕ್ಸ್‌ನಲ್ಲಿ ಸಹಾಯಕ ಪ್ರಾಧ್ಯಾಪಕಿ ಆಗಿದ್ದಾರೆ. ಅವರು ಶಿಕ್ಷಣದಲ್ಲಿ ತಮ್ಮ ಪಿಎಚ್.ಡಿ.,ಯನ್ನು ಜೆಎನ್‌ಯುನ ಝಾಕೀರ್ ಹುಸೈನ್ ಸೆಂಟರ್ ಫಾರ್ ಎಜುಕೇಷನ್ ಸ್ಟಡೀಸ್‌ನಲ್ಲಿ ಮಾಡುತ್ತಿದ್ದಾರೆ. ಅವರನ್ನು suneeta.m76@gmail.com ವಿಳಾಸದಲ್ಲಿ ಸಂಪರ್ಕಿಸಬಹುದು.

ವಿಜಯ ಕುಮಾರ್: ಅವರು ದೆಹಲಿ ವಿಶ್ವವಿದ್ಯಾಲಯದಿಂದ ಭಾಷಾಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ ಮತ್ತು ಅಣ್ಣಾಮಲೈ ವಿಶ್ವವಿದ್ಯಾಲಯದಿಂದ ಲೈಬ್ರರಿ ಮತ್ತು ಮಾಹಿತಿ ವಿಜ್ಞಾನದಲ್ಲಿ ಎಂಫಿಲ್ ಪದವಿ ಪಡೆದಿದ್ದಾರೆ. ಸದ್ಯ ಅವರು ಭಾಷೆ ಮತ್ತು ಗ್ರಂಥಾಲಯ ವಿಜ್ಞಾನದಲ್ಲಿ ಸಂಶೋಧಕ ಮತ್ತು ಕಾರ್ಯಕರ್ತರಾಗಿದ್ದಾರೆ. vkbooks@gmail.com

ಅನುವಾದ: ರಾಮಕೃಷ್ಣ / **ಪರಿಶೀಲನೆ:** ಎಸ್ ವಿ ಮಂಜುನಾಥ್

ಮೂಲ: *Language and Language Teaching,* Volume 3 Number 1 Issue 5 January 2014.

❑